1049 ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ (ಹುನಗುಂದ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುನಗುಂದ ತಾಲ್ಲೂಕಿನ ಮಲಪ್ರಭಾ ನದಿಯ ದಡದಲ್ಲಿ, ಬರುವಂತಹ ಗ್ರಾಮಗಳು ಪ್ರತಿ ವರ್ಷವೂ ತೊಂದರೆಗೀಡಾಗಿರುವ ರೈತ ಕುಟುಂಬವನ್ನು ಸ್ಥಳಾಂತರಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸ್ಥಳಾಂತರಗೊಂಡ ಸಂತ್ರಸ್ಥ ಕುಟುಂಬಗಳು ಸರ್ಕಾರ ನಿರ್ಮಿಸಿದ ತಗಡಿನ ಶೆಡ್ಡುಗಳಲ್ಲಿ ವಾಸವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಗಂಬಿಹಾಳ, ಚಿಕ್ಕಮಳಗಾವಿ, ಹೀರೆಮಳಗಾವಿ, ಪಾಪತ್ನಾಳ, ಖೈರವಾಡಗಿ, ಚಿಕ್ಕಮಾಗಿ ಈ ಸದರಿ ಗ್ರಾಮಗಳ ಸಂತ್ರಸ್ಥ ಕುಟುಂಬದವರಿಗೆ ಶಾಶ್ವತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮವೇನು;

ಈ) ಸಂತ್ರಸ್ಥ ಶಾಶ್ವತವಾಗಿ ಸ್ಥಳಾಂತರಗೊಳ್ಳುವುದು ಪ್ರತಿಯೊಂದು ಕುಟುಂಬಕ್ಕೆ ಒಂದು ಸೈಟು, ಒಂದುವರೆ ಲಕ್ಷ ರೂಪಾಯಿ ಪರಿಹಾರ ದನವನ್ನು ಪರಿಹಾರ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದಾಗ್ಯೂ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣಗಳೇನು;

ಉ) ಹಾಗಿದ್ದಲ್ಲಿ ಶಾಶ್ವತವಾಗಿ ಸ್ಥಳಾಂತರಗೊಳಿಸಿ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) –ಬಂದಿದೆ–

ಆ) –ಬಂದಿದೆ–

ಇ) ಹುನಗುಂದ ತಾಲ್ಲೂಕಿನ ಕಟಗೂರ ಮತ್ತು ತುರಡಗಿ ಗ್ರಾಮಗಳನ್ನು ಸ್ಥಳಾಂತರಿಸಲು ಈಗಾಗಲೇ 2007ರಲ್ಲಿ ಆದೇಶ ಹೊರಡಿಸಲಾಗಿದೆ.

ನಾರಾಯಣಪುರ ಜಲಾಶಯದ (ಬಸವಸಾಗರ) ಹಿನ್ನೀರಿನಿಂದ ಹುನಗುಂದ ತಾಲ್ಲೂಕಿನಲ್ಲಿ ಬಾಧಿತವಾಗಿರುವ ಇನ್ನೂ ಹಲವಾರು ಗ್ರಾಮಗಳನ್ನು ಸ್ಥಳಾಂತರಿಸುವ ಸಂಬಂಧ ಕೃಷ್ಣಾ ಭಾಗ್ಯ ಜಲ ನಿಗಮವು

ಪರಿಶೀಲಿಸುತ್ತಿದ್ದು, ಅದರಲ್ಲಿ ಗಂಜಿಹಾಳ, ಪಾಪಹ್ನಾಳ ಮತ್ತು ಖೈರವಾಡಗಿ ಗ್ರಾಮಗಳು ಸೇರಿರುತ್ತವೆ. ಈ ಬಗ್ಗೆ ಕೃಷ್ಣಾ ಭಾಗ್ಯ ಜಲ ನಿಗಮ ಮತ್ತು ಜಲಸಂಪನ್ಮೂಲ ಇಲಾಖೆಯಿಂದ ಪ್ರಸ್ತಾವನೆ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು.

ಈ) ಈ ಬಗ್ಗೆ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಪ್ಯಾಕೇಜು ಮಂಜೂರು ಮಾಡುವ ಸಂದರ್ಭದಲ್ಲಿ ಪರಿಶೀಲಿಸಲಾಗುವುದು.

ಉ) ಕೃಷ್ಣಾ ಭಾಗ್ಯ ಜಲ ನಿಗಮ ಮತ್ತು ಜಲಸಂಪನ್ಮೂಲ ಇಲಾಖೆಯಿಂದ ಪ್ರಸ್ತಾವನೆ ಬಂದ ನಂತರ ಮುಂದಿನ ಕ್ರಮ ಜರುಗಿಸಲಾಗುವುದು.

721 ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆ, ಬಸವನಬಾಗೇವಾಡಿ ಮತ ಕ್ಷೇತ್ರದ ಅರಳಲದಿನ್ನಿ, ಆಲಮಟ್ಟಿ, ಚಿಮ್ಮಲಗಿ ಮುಂತಾದ ಪುನರ್ ವಸತಿ ಕೇಂದ್ರಗಳಲ್ಲಿ ರುದ್ರಭೂಮಿ, ತಿಪ್ಪೆಗುಂಡಿ ಹಾಗೂ ಬಣವೆ ಹಾಕಲು ಸ್ಥಳದ ಅಭಾವ ಇರುವುದರಿಂದ ವಿಶೇಷವಾಗಿ ಹೆಚ್ಚುವರಿ ಭೂಸ್ವಾಧೀನಪಡಿಸಿಕೊಳ್ಳುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಬಂದಿದೆ.

ಆ) ಬಸವನ ಬಾಗೇವಾಡಿ ತಾಲ್ಲೂಕಿನ ಪುನರ್ವಸತಿ ಕೇಂದ್ರಗಳಲ್ಲಿ ರುದ್ರಭೂಮಿಯನ್ನು ಈ ಕೆಳಗಿನಂತೆ ಈಗಾಗಲೇ ಒದಗಿಸಲಾಗಿದೆ.

ಕ್ರ. ಸಂ	ಪುನರ್ವಸತಿ ಕೇಂದ್ರದ ಹೆಸರು	ಗ್ರಾಮದ ಹೆಸರು	ಸರ್ವೆ ನಂಬರ್	ಕ್ಷೇತ್ರ (ಎ-ಗು)		
				ಹಿಂದು	ಮುಸ್ಲಿಂ	ಒಟ್ಟು
1	ಬಳೂತಿ	ಬಳೂತಿ	238	3-00	2-00	5-00
2	ಬೇನಾಳ ಆರ್.ಎಸ್.	ಬೇನಾಳ	347	5-00	5-00	10-00
3	ಚಿಮ್ಮಲಗಿ ಭಾಗ-1ಎ	ನಿಡಗುಂದಿ	56	3-00	2-00	5-00
4	ಗೋನಾಳ	ಗೋನಾಳ	65/1	2-18	1-00	3-18
5	ಚಿಮ್ಮಲಗಿ ಭಾಗ-1ಬಿ	ಅರಳದಿನ್ನಿ	38	3-00	2-00	5-00
6	ಹಳೇರೊಳ್ಳಿ ತಾಂಡಾ	ಹಳೇರೊಳ್ಳಿ	116/2ಎ, 117	2-06	-	2-06
7	ಚಿಮ್ಮಲಗಿ ಭಾಗ-2 (ಶ್ರೀಕಳವಾಡಿ)	ಶಿಕಳವಾಡಿ	116/2 86/ಬಿ	6-00	3-25	9-25
8	ಸಿದ್ದನಾಥ, ಹಳೆರೊಳ್ಳಿ	ಹಳೇರೊಳ್ಳಿ	115	4-00	1-00	5-00